

# ಪ್ರೇಮ ಕಷಾಯ

ಬಟ್ಟೆಗಳೇ ಆದರೂ... ಅದೇನು ಗೆಲುವು... ಅದೆಂಥ ಉಲ್ಲಾಸ... ಈ ಚಿಣ್ಣರ ಎಳೆ ಮೊಗಗಳಲ್ಲಿ? ಇದೇ 'ಬ್ಲೂ ಲೈಟ್' ಮಾರುವ ಕೆಮ್ಮಿನ ಗುಳಿಗೆಗಳಿಗೆ– ಕಷಾಯಗಳಿಗೆ ಈ ಪುಟ್ಟ ಕಂದಮ್ಮಗಳು ಹಲವಾರು ಬಾರಿ ಗಿರಾಕಿಗಳಾಗುವುದೂ ಉಂಟು!

ಐಕಿ ಶಾನ್ ಸ್ಟೇನ್ ಈ 'ಬ್ಲೂ ಲೈಟ್' ಅಂಗಡಿಯ ರಾತ್ರಿಪಾಳಿಯ ಗುಮಾಸ್ತ. ಅಷ್ಟೇ ಹೇಳಿ ಬಿಟ್ಟರೆ, ಅದು ಅವನ ಬಗ್ಗೆ ಕಡಿಮೆ ಹೇಳಿದ ಹಾಗೆ! ಹಾಗಲ್ಲ. ಈ ಐಕಿ ತನ್ನಲ್ಲಿಗೆ ಬರುವ ಅಮಾಯಕ ಗಿರಾಕಿಗಳ ಆಪ್ತಮಿತ್ರನೂ ಹೌದು... ಸಲಹೆಗಾರನೂ ಹೌದು. ಹಿತವಾಗಿ ಮಾತಾಡುತ್ತಾನೆ. ಸಂದರ್ಭೋಚಿತವಾಗಿ ಅವರವರ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನೂ ದಯ ಪಾಲಿಸುತ್ತಾನೆ. ಅವನ ಇಂಥ ಮಧುರವಾದ ಹಿತೋಪದೇಶಗಳಿಗೆ ಮರುಳಾದ ಮುಗ್ಧ ಗಿರಾಕಿಗಳನೇಕರು 'ಇನ್ನು ಈ ಮದ್ದಿನ ಹಂಗಾದರೂ ಯಾಕೆ?' ಅಂತ, ಅದನ್ನು ಅಲ್ಲೇ ಗಟಾರದಲ್ಲಿ ಸುರಿದು ಹೋದದ್ದೂ ಇದೆ!

ನಿಗೂಢ ಮುಖ ಭಾವದ, ಕನ್ನಡಕ ಏರಿಸಿದ ದಪ್ಪ ಮೂಗಿನ, ಬುದ್ಧಿವಂತ ನಿಲುವುಗಳ, ಈ ಕಾರಕೂನ ಸಾಕಷ್ಟು ಜನಪ್ರಿಯನೂ ಆಗಿದ್ದ.

ಅಂಗಡಿಯಿಂದ ಒಂದೆರಡೇ ಮಾರು ದೂರ ಇದ್ದ ಶ್ರೀಮತಿ ರಿಡಲ್ ಮನೆಯಲ್ಲಿ ಐಕಿಯ ವಾಸ್ತವ್ಯ. ಅವನ ಊಟ–ತಿಂಡಿಗಳೂ ಅಲ್ಲಿಯೇ. ರಿಡಲ್ ದಂಪತಿಗಳಿಗೆ ರೋಸಿ ಎಂಬ ಮಗಳಿದ್ದಳು. ಬಲು ಮುದ್ದಾಗಿದ್ದ ಈ ಬೆಡಗಿ, ತನ್ನ ಚೆಲು ಚಹರೆಗಳಿಂದ ಮನೆತುಂಬ ಬೆಳಕು ಸೂಸಿ ಬಿಡುತ್ತಿದ್ದಳು. ಒಮ್ಮೆ ಅವಳನ್ನು ನೋಡಿದವರು... ಮತ್ತೊಮ್ಮೆ ತಿರುಗಿ ನೋಡದಿರಲು ಸಾಧ್ಯವೇ ಇರಲಿಲ್ಲ. ಅಂಥ ಸೊಬಗಿ ಅವಳು... ಆ ರೋಸಿ.

ಸುತ್ತ–ಬಳಸು ಯಾಕೆ? ನೀವು ಈಗಾಗಲೇ ಊಹಿಸಿದಂತೆ... ಐಕಿ ಈ ಮುದ್ದು ಹುಡುಗಿಯನ್ನು ಪ್ರೀತಿಸುತ್ತಿದ್ದ. ಎದೆತುಂಬ ಇಟ್ಟುಕೊಂಡು ಆರಾಧಿಸುತ್ತಿದ್ದ ಅವನ ಯೋಚನೆಗಳಲ್ಲೆಲ್ಲ ಅವಳೇ ತುಂಬಿ ಕೊಂಡಿದ್ದಳು. ಅವನೆಲ್ಲ ಭಾವನೆಗಳಿಗೆ... ಅವಳೇ ಬಣ್ಣ! ಅವನ ಮಟ್ಟಿಗೆ, ಪ್ರಪಂಚದ ಯಾವುದೇ ಸಂಪತ್ತು ತನ್ನೀ ಪ್ರಿಯತಮೆಗೆ ಸರಿದೂಗುತ್ತಿರಲಿಲ್ಲ.

ಆದರೇನು ಐಕಿಯದು ಗುಪ್ತ ಪ್ರೇಮ.. ಅವನ ಪ್ರೇಮಾರಾಧನೆಯೇನಿದ್ದರೂ ಹೃದಯದ ಕವಾಟದೊಳಗೆ ಮಾತ್ರ! ಸ್ವಭಾವತಃ ಇವ ಅಂಜು ಕುಳಿ. ಹಿಂಜರಿಕೆ ಅವನ ವ್ಯಕ್ತಿತ್ವದ ಪ್ರಧಾನ ಗುಣ. ತನ್ನ ಔಷಧಿಯಂಗಡಿಯಲ್ಲಿ... ತನ್ನದೇ ಮೇಜಿನ ಹಿಂದಿನ ಸಾಮ್ರಾಜ್ಯದಲ್ಲಿ... ಅವನೊಬ್ಬ ಅಧಿಪತಿ! ದಾರ್ಶನಿಕ! ಅಲ್ಲಿ ಅವನು ಮೆರೆಯುವ ತರ್ಕಗಳಿಗೆ– ಪ್ರವಚನಗಳಿಗೆ ಸೀಮೆಯೇ ಇಲ್ಲ. ಆದರೆ.... ಒಂದೊಮ್ಮೆ ಅಂಗಡಿಯಿಂದ ಹೊರ ಬಿದ್ದನೋ... ಅವನಂಥ ಪುಕ್ಕಲ ಇನ್ನೊಬ್ಬನಿಲ್ಲ. ಅರೆ ಕುರುಡಾವಸ್ಥೆಯ, ದುರ್ಬಲ ಮೊಣಕಾಲುಗಳ, ಔಷಧದ ವಾಸನೆ ಬೀರುವ ದೊಗಳೆ ಬಟ್ಟೆಗಳ, ಐಕಿ, ಬೀದಿಯಂಚಿನಲ್ಲಿ ಆಚೀಚೆ ನೋಡದೆ ತಲೆ ಬಾಗಿಸಿ ನಡೆದು ಬಿಡುತ್ತಿದ್ದ.

ಇಂಥೊಬ್ಬ ತೀವ್ರ ಪ್ರೇಮಿಯ ಕಥನದಲ್ಲಿ ಶತ್ರುವಾಗಿದ್ದವನು ಚಂಕ್ ಮೆಕ್‌ಗೊವಾನ್, ಚೆಲುವೆ ರೋಸಿ ಆಗಿಂದಾಗ ಲಾವಣ್ಯದಿಂದ ಚಿಮ್ಮಿಬಿಡುವ ಸುಂದರ ಮಂದಹಾಸಗಳಿಗಾಗಿ ಚಂಕ್ ಸಹ ಹಂಬಲಿಸುತ್ತಿದ್ದ. ಆದರೆ ಅವನು ಬಲು ಲವಲವಿಕೆಯ ಹುಡುಗ.... ಜೀವನೋತ್ಸಾಹಿ. ಜತೆಗೆ ಐಕಿಯ ಹಾಗೆ ಮೈದಾನದ ಹೊರಗಿದ್ದು ಆಟವಾಡುವವನೂ ಅವನಲ್ಲ. ಅವನ ಗುರಿ ಮತ್ತು ಆಟ ಎರಡೂ ಸ್ಪಷ್ಟ ಮತ್ತು ನೇರ!

ಚಂಕ್, ಗುಮಾಸ್ತೆ ಐಕಿಯ ಗಿರಾಕಿಯೂ, ಹಾಗೆಯೇ ಗೆಳೆಯನೂ ಆಗಿದ್ದ. ಅದೆಲ್ಲೆಯೋ ತಾಗಿದ ಯಾವುದೋ ಮೂಗೇಟಿನ ಚಿಕಿತ್ಸೆಗೋ ಅಥವಾ ಯಾವುದಾದರೂ ಸಣ್ಣಪುಟ್ಟ ಗಾಯಕ್ಕೆ ಬಟ್ಟೆ ಸುತ್ತಿಸಿಕೊಳ್ಳಲೆಂದೋ ಈ ತರುಣ ಆಗಾಗ ಐಕಿಯ ಬಳಿಗೆ ಬರುತ್ತಿದ್ದ. ಬಹಳ ಸಜ್ಜನಿಕೆಯ ಮುಖಭಾವ ಈ ಚಂಕ್‌ಗೆ. ಸಮಯ ಬಂದಾಗ ಅಷ್ಟೇ ದೃಢತೆಯೂ ಅಲ್ಲಿ ಮೆತ್ತಿಕೊಂಡಿರುತ್ತಿತ್ತು. ಒಟ್ಟಾರೆ ನಿರ್ಮಲ ಅಂತಃಕರಣದ ಹುಡುಗನಿವ.

ಒಂದು ಸಂಜೆ ಚಂಕ್ ನೇರವಾಗಿ ಐಕಿಯ ಅಂಗಡಿಗೆ ಬಂದ. ಅವನೆದುರಿಗಿನ ಪುಟ್ಟ ಕುರ್ಚಿಯಲ್ಲಿ ಉಲ್ಲಸಿತನಾಗಿ ಹುದುಗಿ ಕೊಂಡ.

'ಐಕೀ.... ನಿನ್ನ ಕಿವಿಯನ್ನು ಸ್ವಲ್ಪ ಚುರುಕುಗೊಳಿಸಿ ಕೊಳ್ಳಪ್ಪ....' ಚಂಕ್ ಹೇಳುತ್ತಿರುವಾಗಲೇ ಐಕಿ ಒಳಗೆ ಹೋಗಿ ಕುಟ್ಟಾಣಿಯನ್ನು ತಂದುಕೊಂಡು ಮದ್ದನ್ನು ಕುಟ್ಟುತ್ತಾ ಅವನೆದುರಿಗೇ ಆಸೀನನಾದ.

ಚಂಕ್ ಮುಂದುವರಿಸಿದ – 'ನಾನೀಗ ಕೇಳುವಂಥ ಔಷಧಿ ನಿನ್ನ ಹತ್ರ ಸಿಗುತ್ತೋ ಇಲ್ವೋ... ಅದು ಕೂಡ ನಂಗೆ ಅನುಮಾನ.'

'ಸುಮ್ಮನೆ ಅಂಗಿ ಕಳಚು ನೀನು' ಐಕಿ ಗಡುಸಾಗಿ ಅದೇಶಿಸಿದ. 'ನಂಗೆ ಗೊತ್ತಿಲ್ವೇ?... ನಿನ್ನ ಪಕ್ಕೆಲುಬುಗಳ ಹತ್ರ ಯಾರೋ ಇರಿದಿದ್ದಾರೆ. ನಾನದಕ್ಕೆ ಈಗ ಔಷಧ ಹಾಕಬೇಕು. ಅಷ್ಟೇ ತಾನೇ? ಅಲ್ಲಯ್ಯಾ, ನಾನು ಎಷ್ಟು ಸಾರಿ ಹೊಡಕೊಂಡೆ ಆ ಪೋಕರಿ ಅಲೆಮಾರಿಗಳ ಸಹವಾಸ ಮಾಡಬೇಡ ಅಂತಾ?'

'ಅಯ್ಯೋ, ಹಾಗಲ್ಲಪ್ಪ!' ಚಂಕ್ ಅಕಳಂಕವಾಗಿ ನಕ್ಕು ಬಿಟ್ಟ. 'ಅದರೆ, ಗೆಳೆಯಾ, ನನ್ನ ತೊಂದರೆಯನ್ನಂತು ನೀನು ಸರಿಯಾಗೇ ಗುರುತಿಸಿದ್ದೀ.... ' ಮೆಲ್ಲಗೆ ಎದೆ ಮುಟ್ಟಿಕೊಳ್ಳುತ್ತಾ ಆ ತುಂಟ ನಾಟಕೀಯವಾಗಿ ಮುಲುಗಿದ. 'ಹ್ಞಾ, ಇಲ್ಲೇ... ಇಲ್ಲೇ ನೋಡು... ಅಂಗಿಯ ಒಳಗೇ... ಪಕ್ಕೆಲುಬುಗಳ ಹತ್ತಿರವೇ ಇರುವ ಹೃದಯದ್ದೇ ಬಾಧೆ...'

ಔಷಧವನ್ನು ಕುಟ್ಟುತ್ತಲೇ ಐಕಿ ಗೆಳೆಯನತ್ತ ಒಂದು ಗಾಢ ಪ್ರಶ್ನಾರ್ಥಕ ನೋಟವನ್ನು ಎಸೆದ.